ಕೊಂಡು ಆಗಲೇ ೧೦ ವರ್ಷದ ಮೇಲ್ಪಟ್ಟಾಗಿದೆ. ಈ ೧೦ ವರ್ಷಗಳಲ್ಲಿ ಅವರಿಗೆ ಪರಿಹಾರ ಧನ ನಿಶ ಯ ಮಾಡುವುದಾಗಲೀ ಅಥವಾ ಆಕ್ಟ್ವಿಜಿಷನ್ ಪ್ರೊಸೀಡಿಂಗ್ಸ್ ಮಾಡುವುದಾಗಲೀ ಯಾವುದೇ ಕೆಲಸ ಇನ್ನೂ ಆಗದೇ ಇದೆ. ಇನ್ನು ಮುಂದೆ ಎಷ್ಟು ಕಾಲಾವಧಿಯಲ್ಲಿ ಈ ಕೆಲಸ ಪೂರ್ತಿಯಾಗುತ್ತದೆ? ಅವರಿಗೆ ಪರಿಹಾರಧನವನ್ನು ನಿಗದಿ ಮಾಡಿ ಯಾವಾಗ ಅವರಿಗೆ ಕೊಡುತ್ತೀರಿ ಎಂದು ಹೇಳುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ :— ಸ್ವಾಮಿ, ಆ ಜಮೀನುಗಳನ್ನೆಲ್ಲಾ ೧೯೬೩ ನೇ ಇಸವಿಯಲ್ಲಿ ಸರ್ಕಾರ ದವರು ತಪ್ಪು ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆ. ಅವತ್ತಿನಿಂದ ಈವತ್ತಿನವರೆಗೂ ಭೂಮಾಲೀಕರಿಗೆ ಪರಿಹಾರವನ್ನು ಕೊಟ್ಟಿಲ್ಲ; ಉತ್ತರದಲ್ಲಿ ತಿಳಿಸುವಂತೆ ಒಂದಲ್ಲ ಒಂದು ಕಾರಣದಿಂದ ಅವರಿಗೆ ಪರಿಹಾರ ಪನ್ನು ಕೊಟ್ಟಿಲ್ಲ. ಆಗಷ್ಟು ಜಾಗ್ರತೆ ಅವರಿಗೆ ಪರಿಹಾರವನ್ನು ಕೊಡಬೇಕೆಂದು ಸರ್ಕಾರದ ಸದಿಚ್ಛೆ ಯಾಗಿದೆ. ಲೋಕೋಪಯೋಗಿ ಇಲಾಖೆಯವರೂ ಸಹ ಪೊನ್ನೆದಿವಸ ಪರಿಗೆ ಪರಿಹಾರ ಕೊಡಬೇಕೇ ಬಿಡಬೇಕೇ ಎಂಬ ಬಗ್ಗೆ ತೀರ್ಮಾನ ತೆಗೆದುಕೊಂಡಿದ್ದಾರೆ. ಅವರಿಗೆ ಪರಿಹಾರ ಕೊಡುವ ವಿಚಾರದಲ್ಲೆ ಈಗಾಗಲೇ ವಿಳಂಬವಾಗಿದೆ. ಅಧಿಕಾರಿಗಳು ಇದರಲ್ಲಿ ಸರಿಯಾಗಿ ವರ್ತನೆ ಮಾಡಿಲ್ಲ ಇದನ್ನು ಸರಿಪಡಿಸು ವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಭಾವುರಾವ್ ದೇಶಪಾಂಡೆ.— ಈಗ ಅಲ್ಲಿ ಸುಮಾರು ೫೦ ಜನರ ಜಮೀನುಗಳನ್ನು ತಾವು ವಶಪಡಿಸಿಕೊಂಡಿದ್ದೀರಿ. ಅವರ ಪೈಕಿ ೧೯೨೨ ಮತ್ತು ೧೯೩೩ ನೇ ಸರ್ವೆ ನಂಬರ್ ಜಮೀನುಗಳ ಮಾಲೀಕ ರಿಗೆ ಈಗಾಗಲೇ ಪರಿಹಾರವನ್ನು ಕೊಟ್ಟಿದ್ದೀರಿ, ಉಳಿದವರಿಗೆ ಕೊಟ್ಟಿಲ್ಲ. ಈ ರೀತಿಯ ಪಕ್ಷಪಾತಕ್ಕೆ ಏನು ಕಾರಣ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ.— ತಾವು ಹೇಳಿರುವ ಅಭಿಪ್ರಾಯವನ್ನು ನಾನು ಒಪ್ಪಿಕೊಂಡಿದ್ದೇನೆ; ಇದರಲ್ಲಿ ಅಧಿಕಾರಿಗಳು ವಿಳಂಬ ಮಾಡಿದ್ದಾರೆ. ಅವರೆಲ್ಲರಿಗೂ ಪರಿಹಾರವನ್ನು ಕೊಡಿಸುವುದಕ್ಕೆ ನಾನಂ ಪ್ರಯತ್ನ ಮಾಡುತ್ತೇನೆ. ಇದರಲ್ಲಿ ತಾರತಮ್ಯ ನಡೆದಿದೆ ಎಂದು ತಾವು ಹೇಳಿದ್ದೀರಿ. ಇದನ್ನು ವಿಚಾರ ಮಾಡಿ ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಭಾವುರಾವ್ ದೇಶಪಾಂಡೆ.— ಈ ವಿಷಯದಲ್ಲಿ ರೈತರುಗಳಿಗೆ ಪರಿಹಾರ ಹಣವನ್ನು ಆದಷ್ಟು ಬೇಗ ಕೊಡುವ ವ್ಯವಸ್ಥೆ ಮಾಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದರೂ ಕೂಡ ಅವರು ಹಣವನ್ನು ಕೊಡುವುದಕ್ಕೆ ಯಾವುದೇ ಕ್ರಮವನ್ನು ಕೈಕೊಂಡಿಲ್ಲ ರೈತರಿಗೆ ಪರಿಹಾರ ಹಣ ಬೇಗನೇ ಸಿಗದೇ ಅವರು ಗೋಳಾಡತಕ್ಕಂಥ ಪರಿಸ್ಥಿತಿಗೆ ಬಂದಿದ್ದಾರೆ. ಇಂತಹ ಸನ್ನಿವೇಶದಲ್ಲಿ ಯಾವ ಅಧಿಕಾರಿಗಳಿಂದ ವಿಳಂಬವಾಗಿದೆ ಎಂಬುದನ್ನು ವಿಚಾರಣೆ ಮಾಡುತ್ತೀರಾ? ಅಂತಹ ಅಧಿಕಾರಿಗಳ ಮೇಲೆ ಏನಾದರೂ ಕ್ರಮ ಕೈಕೊಳ್ಳುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ.— ನಾನಾಗಲೇ ಸುಲಲಿತವಾದ ಭಾಷೆಯಲ್ಲೇ ಉತ್ತರ ಕೊಟ್ಟಿದ್ದೇನೆ. ಅವರು ಹೇಳಿದ್ದನ್ನೆಲ್ಲಾ ಮಾಡುತ್ತೇವೆ ಎಂದು ಭರವಸೆ ಕೊಟ್ಟಿದ್ದೇನೆ. ಅದರಮೇಲೂ ಅದನ್ನು ಮಾಡುತ್ತೀರಾ— ಮಾಡುತ್ತೀರಾ ಎಂದು ಪದೇ ಪದೇ ಹೇಳಿದರೆ ಅದಕ್ಕೆ ನಾನೇನು ಹೇಳಲಿ.

ಅಧ್ಯಕ್ಷರು.— ಪಶ್ನೆ ನಂ. ೫೮೨ ಮತ್ತು ೫೮೭ ತಪ್ಪಿಹೋಯಲಾಗಿದೆ. ಶ್ರೀ ಶಿವಪ್ಪನವರ ಪರವಾಗಿ ಮಾನ್ಯ ಭಾಸ್ಕರ ಶೆಟ್ಟಿಯವರು ಪ್ರಶ್ನೆ ನಂ. ೬೩೮ ನ್ನು ಕೇಳಬಹುದು

Facilities for General Hospital at Tiptur

638. SRI B. BHASKER SHETTY (Kaup) [on behalf of SRI V. L. SHIVAPPA (Tiptur)].—Will the Minister for Health and Family Welfare be pleased to state :—

(*a*) when was the General Hospital at Tiptur Established ;

(*b*) whether all the facilities of General Hospital are available at the said Hospital ?

SRI M. MALLAPPA (Minister for Health and Family Welfare).—

(*a*) Sanction was accorded for the establishment of General Hospital at Tiptur as pe G.O. No. PLM 131 PNP 63 dated 1st July 1963.

(*b*) The facilities that are normally provided to a General Hospital of this type, are provided.

ಶ್ರೀ ಬಿ. ಭಾಸ್ಕರಶೆಟ್ಟಿ.- ಸ್ವಾಮಿ, ತಿಪಟೂರಿನಲ್ಲಿರತಕ್ಕಂಥ ಆಸ್ಪತ್ರೆ ೧೯೬೩ನೇ ಇಸವಿಯಲ್ಲಿ ಸಾರ್ವಜನಿಕ ಆಸ್ಪತ್ರೆಯಾಗಿ ಪರಿವರ್ತನೆ ಆಗುವಾಗ ಅಲ್ಲಿ ಹಾಸಿಗೆಗಳ ಸಂಖ್ಯೆ ಎಷ್ಟು ಇತ್ತು ? ಅಲ್ಲಿ ಡಾಕ್ಟರುಗಳು ಎಷ್ಟು ಜನ ಇದ್ದರು ? ಇತರ ಸಿಬ್ಬಂದಿವರ್ಗದವರು ಎಷ್ಟು ಜನ ಇದ್ದರು ಮತ್ತು ಈಗ ಬೆಡ್‌ಗಳು ಸಂಖ್ಯೆ ಎಷ್ಟು ಇದೆ ? ಡಾಕ್ಟರುಗಳು ಹಾಗೂ ಸಿಬ್ಬಂದಿವರ್ಗದವರು ಎಷ್ಟು ಜನ ಇದ್ದಾರೆ ?

† ಶ್ರೀ ಎಂ. ಮಲ್ಲಪ್ಪ.—ಸ್ವಾಮಿ, ಈಗ ಅಲ್ಲಿ ೬೭ ಬೆಡ್‌ಗಳು ಇವೆ. ೫೫ ಜನ ಡಾಕ್ಟರುಗಳು ಇದ್ದಾರೆ. ಒಂದು ಡೆಂಟಲ್ ಯೂನಿಟ್ ಇದೆ. ಎಕ್ಸ್‌ರೇ ಡಿಪಾರ್ಟ್‌ಮೆಂಟ್‌ನವರು ಒಂದು ಎಕ್ಸ್‌ರೇ ಯಂತ್ರವನ್ನು ಕೊಟ್ಟಿದ್ದಾರೆ. ಮೆಟರಿನಿಟಿ ವಿಭಾಗಕ್ಕೆ ಒಬ್ಬರು ಸರ್ಜನ್ ಇದ್ದಾರೆ : ಒಬ್ಬರು ಡೆಂಟಿಸ್ಟ್ ಇದ್ದಾರೆ. ಆಲ್ಲಿರುವ ರೋಗಿಗಳಿಗೆ ಡೈಟ್ ಸಪ್ಲೈ ಮಾಡುವುದಕ್ಕೆ ವ್ಯವಸ್ಥೆ ಮಾಡಿದೆ. ಅಲ್ಲಿರುವ ರೋಗಿಗಳಿಗೆ ೭೫ ಸಾವಿರ ರೂಪಾಯಿಗಳಷ್ಟು ಔಷಧಿಗಳನ್ನು ಈ ವರ್ಷಕ್ಕೆ ಸರಬರಾಜು ಮಾಡುತ್ತಿದ್ದೇವೆ.

Now there are two male doctors. One is a specialist in Surgery and there is one Lady Medical Officer besides one Assistant Surgeon. ಇದರ ಜೊತೆಗೆ ಔಟ್ ಪೇಷೆಂಟ್ ಡಿಸ್‌ಪೆನ್ಸರಿ ವ್ಯವಸ್ಥೆ ಕೂಡ ತಿಪಟೂರಿನಲ್ಲಿ ಏರ್ಪಾಡಾಗಿದೆ. ಜನಗಳಿಗೆ ಏನಾದರೂ ಔಷಧೋಪಚಾರ ಅಗತ್ಯವಾದಾಗ ಔಷಧೋಪಚಾರ ಒದಗಿಸಬೇಕೆಂದು ಮಾಡಿದ್ದೇವೆ. ಆದರೂ ಕೂಡ ನನಗೆ ತಿಳಿದ ಮಟ್ಟಿಗೆ ಎಲ್ಲಾ ಜನರಲ್ ಆಸ್ಪತ್ರೆಗಳಿಗೆ ಲ್ಯಾಬೊರೇಟರಿ ಇರಬೇಕಾಗುತ್ತದೆ, ಆದರೆ ಅದನ್ನು ಮಂಜೂರು ಮಾಡಿಲ್ಲ. ಮಂಜೂರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈ ಆಸ್ಪತ್ರೆ ಪ್ರಾರಂಭವಾದಾಗ ಒಬ್ಬರು ಸರ್ಜನ್, ಒಬ್ಬರು ಲೇಡಿ ಡಾಕ್ಟರ್ ಇದ್ದರು. ಆಮೇಲೆ ತಾವು ಡೆಂಟಲ್ ಸರ್ಜನ್ ಹೆಚ್ಚಾಗಿ ಹಾಕಿದ್ದೀರಿ. ೪೭ ಬೆಡ್‌ಗಳು ಇದ್ದಂತಹ ಆಸ್ಪತ್ರೆಯಲ್ಲಿ ಈಗ ೬೭ ಬೆಡ್‌ಗಳು ಇವೆ ಎಂದು ತಾವೇ ಹೇಳುತ್ತಿದ್ದೀರಿ. ಕಳೆದ ೧೫ ವರ್ಷಗಳಿಂದಲೂ ಒಬ್ಬರೇ ಸರ್ಜನ್, ಒಬ್ಬರೇ ಲೇಡಿ ಡಾಕ್ಟರ್ ಇದ್ದಾರೆ. ಫಿಜಿಷಿಯನ್ ಡಾಕ್ಟರ್ ಒಬ್ಬರನ್ನೂ ತಾವು ಹಾಕಿಲ್ಲ. ಅದು ಜನರಲ್ ಆಸ್ಪತ್ರೆಯಾಗಿದ್ದರೂ ಕೂಡ ಮತ್ತು ೬೭ ಹಾಸಿಗೆಯುಳ್ಳ ಇಂತಹ ಆಸ್ಪತ್ರೆಗೆ ಇಷ್ಟು ಕಡಿಮೆ ಡಾಕ್ಟರ್‌ಗಳನ್ನು ಹಾಕಿದ್ದೀರಿ. ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಡಾಕ್ಟರ್‌ಗಳನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ಮಲ್ಲಪ್ಪ.—ಅದು ಮೊದಲು ಎಲ್.ಎಫ್ ಡಿಸ್‌ಪೆನ್ಸರಿಯಾಗಿತ್ತು. ಈಗ ಅದು ಜನರಲ್ ಆಸ್ಪತ್ರೆಯಾಗಿ ಪರಿವರ್ತನೆಯಾಗಿದೆ. ಜನರಲ್ ಆಸ್ಪತ್ರೆಗೆ ಯಾವ ಯಾವ ರೀತಿ ಅನುಕೂಲಗಳು ಇರಬೇಕೋ ಅದೆನ್ನೇ ಅನುಸರಿಸಿ ಅನುಕೂಲಗಳನ್ನು ಒದಗಿಸಿಕೊಡುತ್ತಿದ್ದೇವೆ. ಇನ್ನೊಬ್ಬರು ಸರ್ಜನ್ ಬೇಕು ಎಂಬುದಾಗಿ ಪೂರ್ಯ ಸದಸ್ಯರು ಹೇಳುತ್ತಿದ್ದಾರೆ. ಅದನ್ನು ಡೈರೆಕ್ಟರ್ ಆಫ್ ಹೆಲ್ತ್ ಸರ್ವೀಸಸ್‌ನವರಿಗೆ ಪ್ರಪೋಸಲ್ಸ್‌ಗಳನ್ನು ಕಳುಹಿಸಿಕೊಟ್ಟು ಅದನ್ನು ವಿಚಾರಣೆ ಮಾಡಿ ಸೌಕರ್ಯವನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಫಿಜಿಷಿಯನ್ ಇಲ್ಲದಿರುವುದರಿಂದ ಆದಷ್ಟು ಬೇಗ ಫಿಜಿಷಿಯನ್ನಾದರೂ ಹಾಕಬೇಕು. ಆದರ ಜೊತೆಗೆ ಕ್ರಮಬದ್ಧವಾದ ಸಿಬ್ಬಂದಿ ಇಲ್ಲ, ನರ್ಸ್‌ಗಳು ಇಲ್ಲ, ಮಿಡ್ ವೈಫ್ಸ್ ಇಲ್ಲ. ಆದ್ದರಿಂದ ಈ ಒಂದು ಕೊರತೆಯನ್ನು ನೀಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

SRI M. MALLAPPA.—I have also visited the place. I will try to fill up the vacancies as far as possible. The Hon. member wants one Physician to be posted. There is no difficulty.

MR. SPEAKER.—Now Questions are over.

QUESTIONS FOR ANSWERS ON THE DAY
(but not taken up)

Primary Schools in Mulbagal Taluk

496. SRI J. M. REDDY (Mulabagal).—Will the Minister for Education be pleased to state :—

(*a*) the number of Junior Primary Schools in Mulabagal Taluk ;

(*b*) whether the government intend to sanction to start at least 15 Junior Primary Schools during this year itself as there is shortage of Junior Primary Schools in this taluk ?

SRI B. SUBBAYYA SHETTY (Minister for Education).—

(*a*) 181.

(*b*) The matter will be considered.

Construction of bridge across Doddahalla, Badkegudlu Village.

579. SRI N. BASAVAIAH (Chikkanayakanahally).—Will the Minister for Public Works be pleased to state :—

(*a*) the reasons for not starting the work so far though sanction has been accorded and tenders called for for bridge work across Doddahalla near Badakegudlu village, Kandikere hobli in Chikkanayakanahalli taluk ;

(*b*) the reasons for not starting the construction work of this bridge though Minister for Public Works had inspected the spot previously and realised its urgent need ?

SRI S. BANGARAPPA (Minister for Public Works).—

(*a*) The work has been entrusted to the contractor after finalising the tender and fixing 15th June 1978 as the day of starting the work. Draft agreement in this regard is also entered into.